ದಿನಾಂಕ: 17.01.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ 34(ಎ) ಮತ್ತು (ಬಿ) ಪರವಾಗಿ ಶ್ರೀ ಬಿ ಎನ್ ಟಿ . ವಕೀಲರಿಂದಃ**

ಸರ್ವೆ ನಂ. 64/2 ನ್ನು 34 ನೇ ಪ್ರತಿವಾದಿ ಶ್ರೀನಿವಾಸ್ ರವರು ಸಿದ್ದಲಿಂಗಪ್ಪ, ಓಬಳಪ್ಪ, ಲಿಂಗಪ್ಪ, ಶಿವಪ್ಪ ಮತ್ತು ಒದ್ದಪ್ಪ ಇವರಿಂದ ಖರೀದಿ ಮಾಡಿರುತ್ತಾರೆ. ಅವರು ಒಂದು ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ. ಸರ್ವೆ ನಂ 64/2 ಒಟ್ಟು 4 ಎಕರೆ 13 ಗುಂಟೆ ಜಮೀನು ಇದೆ. ಹಿರಿಯೂರು ಗ್ರಾಮದ ಸರ್ವೆ ನಂ 64/5 ಒಟ್ಟು 4 ಎಕರೆ 13 ಗುಂಟೆ ಇದೆ. ಸರ್ವೆ ನಂ. 64/2 ನ್ನು ಈ ದಾವಾದಲ್ಲಿ ಸೇರಿಸಿಲ್ಲ ಎಂದರೆ ನಿಜ. ದಾವಾ ಅನುಸೂಚಿ 02 ನೇ ಆಸ್ತಿಯನ್ನು ಜಿಲ್ಲಾಧಿಕಾರಿಯವರು ಕೃಷಿಯೇತರ ಭೂಮಿಯಾಗಿ ಪರಿವರ್ತಿಸಿ ನಿವೇಶನಗಳನ್ನಾಗಿ ವಿಗಂಡಿಸಿದ್ದಾರೆ ಎಂದರೆ ನಿಜ.

ದಾವಾ ಸಲ್ಲಿಸುವ ಸಮಯದಲ್ಲಿ ನಿವೇಶನದಲ್ಲಿ ಇತರರು ಮನೆ ಕಟಿದ್ದಾರೆಂದರೆ ಎಂದರೆ ಸರಿಯಲ್ಲ. ದಾವಾ ಸಲ್ಲಿಸುವ ಸಮಯದಲ್ಲಿ ದಾವಾ ಅನುಸೂಚಿ 02 ನಿವೇಶನಗಳಾಗಿ ಪರಿವರ್ತಿವಾಗಿವೆ ಎಂದರೆ ಸರಿ. ಆ ಜಮೀನನಲ್ಲಿ ಒಟ್ಟು 100 ಕ್ಕಿಂತ ಹೆಚ್ಚು ನಿವೇಶನಗಳಾಗಿವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಒಂದೊಂದು ನಿವೇಶನವು ಸುಮಾರು 08 ಲಕ್ಷ ಬೆಲೆಬಾಳುತ್ತವೆ. ದಾವಾ ಅನುಸೂಚಿ 03 ಮತ್ತು 04 ನ್ನು ಕೂಡಾ ಜಿಲ್ಲಾಧಿಕಾರಿಗಳು ಭೂಪರಿವರ್ತನೆ ಮಾಡಿದ್ದಾರೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿ 02 ರಲ್ಲಿರುವ ಜಮೀನನ್ನು ಈಗ ಬೇರೆಯವರಿಗೆ ಕ್ರಯವಾಗಿದೆ ಎಂದರೆ ನಿಜ. ದಾವಾ ಹಾಕುವ ಸಮಯದಲ್ಲಿ ದಾವಾ ಅನುಸೂಚಿ 02 ರ ಆಸ್ತಿಯನ್ನು

ಭೂಪರಿವರ್ತನೆಯಾಗಿದೆಯೆಂದು ನಮೂದಿಸಲು ತೊಂದರೆ ಇರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆಗ ಭೂಪರಿವರ್ತನೆಯಾಗಿರುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ.64/2 ರಲ್ಲಿ ಶ್ರೀನಿವಾಸ್ ಅವರು ಜಮೀನು ಕೊಂಡುಕೊಂಡು 25-30 ವರ್ಷ ಆಗಿರಬಹುದು. ಖರೀದಿಮಾಡುವ ಸಮಯದಲ್ಲಿ ನನಗೆ ಈ ವಿಚಾರ ಗೊತ್ತಿರುವುದಿಲ್ಲ. 2002-2003 ರಲ್ಲಿ ಖರೀದಿ ಮಾಡಿರುವ ವಿಚಾರ ಗೊತ್ತಾಗಿರುತ್ತದೆ.

ಕ್ರಯ ಪತ್ರದ ಪ್ರತಿಯನ್ನು 2005-2006 ರಲ್ಲಿ ಪಡೆದುಕೊಂಡಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕಾಲಾವಕಾಶ ಬೇಕು ಎಂದು ಹೇಳುತ್ತಾರೆ. ಸಿದ್ದಲಿಂಗಪ್ಪ, ಓಬಳಪ್ಪ, ಲಿಂಗಪ್ಪ, ಶಿವಪ್ಪ ಮತ್ತು ಒದ್ದಪ್ಪ ಇವರು ನನ್ನ ತಾತನ ಮೂರನೇ ಹೆಂಡತಿಯ ಮಕ್ಕಳಾಗಿರಬಹುದು. ಸಿದ್ದಲಿಂಗಪ್ಪ, ಓಬಳಪ್ಪ, ಲಿಂಗಪ್ಪ, ಶಿವಪ್ಪ ಮತ್ತು ಒದ್ದಪ್ಪ ರವರಿಗೆ ವಿಲ್ ಮುಖಾಂತರ ಆಸ್ತಿ ಬಂದಿದೆ ಎಂದು ಹೇಳುತ್ತಿದ್ದು, ನನ್ನ ತಾತನಿಗೆ ಪಿತ್ರಾರ್ಜಿತ ಆಸ್ತಿಗೆ ವಿಲ್ ಮಾಡುವ ಅಧಿಕಾರವಿಲ್ಲ ಎಂದು ಹೇಳುತ್ತಾರೆ. ಪಿತ್ರಾರ್ಜಿತ ಆಸ್ತಿಗಳನ್ನು ತೋರಿಸಲು ನಿಮ್ಮ ಬಳಿ ದಾಕಲಾತಿಗಳು ಇದೆಯೋ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕಾಲಾವಕಾಶ ಕೊಡಿ ಎಂದು ನೀಡಿರುತ್ತೇನೆ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಸಾಕ್ಷಿಯು ತನಗೆ ಕಾಲಾವಕಾಶವನ್ನು ಕೋರಿದ್ದು** ಸಮಯ ನೀಡಿ **ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು